# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು,

ಬಿ.ಹೆಚ್. ರಸ್ತೆ, ತುಮಕೂರು. 572103 ದೂ.ಸಂ: 0816–2260220


ಸಂಖ್ಯೆ:ವಿವಿಕಾತು:2023–24:

ದಿನಾಂಕ:22.07.2023

## :ದರಪಟ್ಟಿ ಆಹ್ವಾನ:

**ವಿಷಯ:** ತುಮಕೂರು ವಿಶ್ವವಿದ್ಯಾನಿಲಯದ ವಿಜ್ಞಾನ ಕಾಲೇಜಿನ ವಾರ್ಷಿಕೋತ್ಸವ ಆಚರಣೆಯ ಸಂಬಂಧ ಸಭಾಂಗಣ ಸಿದ್ಧತೆಗೆ ಸಂಬಂಧಿಸಿದ ದರಪಟ್ಟಿ ಆಹ್ವಾನಿಸುತ್ತಿರುವ ಕುರಿತು.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನಲ್ಲಿ ದಿನಾಂಕ:08.08.2023 ರಂದು ನಡೆಯಲಿರುವ ಕಾಲೇಜು ವಾರ್ಷಿಕೋತ್ಸವ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಸಭಾಂಗಣ ಸಿದ್ಧತೆಗೆ ಸಂಬಂಧಿಸಿದಂತೆ ಈ ಕೆಳಕಂಡ ಕೋಷ್ಟಕದಲ್ಲಿನ ಪೀಠೋಪಕರಣ / ಸಾಮಗ್ರಿಗಳನ್ನು ಬಾಡಿಗೆ ಆಧಾರದಲ್ಲಿ ಸರಬರಾಜು ಮಾಡಲು ಕೆಳಗಿನ ಷರತ್ತು ಮತ್ತು ನಿಬಂಧನೆಗಳೊಂದಿಗೆ ದರಪಟ್ಟಿಯನ್ನು ಆಹ್ವಾನಿಸಲಾಗಿದೆ.

| ಕ್ರ ಸಂ | ವಿವರ | ಸಂಖ್ಯೆ | ದರ(ರೂ.ಗಳಲ್ಲಿ) (ಎಲ್ಲಾ ತೆರಿಗೆ ಸೇರಿದಂತೆ) |
|---|---|---|---|
| 1 | **Chairs** | | |
| 2 | **Barricades(100x60)** | | |
| 3 | **Red Carpet(20x30)** | | |
| 4 | **Screen (60x100)** | | |

**ಷರತ್ತು ಮತ್ತು ನಿಬಂಧನೆಗಳು:**

1. ಮುಚ್ಚಿದ ಲಕೋಟೆಯ ಮೇಲೆ "ತುಮಕೂರು ವಿಶ್ವವಿದ್ಯಾನಿಲಯದ ವಿಜ್ಞಾನ ಕಾಲೇಜಿಗೆ ಪೀಠೋಪಕರಣ/ಸಾಮಗ್ರಿಗಳನ್ನು ಬಾಡಿಗೆ ಆಧಾರದಲ್ಲಿ ಸರಬರಾಜು ಮಾಡಲು ದರಪಟ್ಟಿ" ಎಂದು ಸ್ಪಷ್ಟವಾಗಿ ನಮೂದಿಸಬೇಕು.
2. ದರಪಟ್ಟಿಯನ್ನು ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ಇವರ ಹೆಸರಿಗೆ ಕಡ್ಡಾಯವಾಗಿ ಅಂಚೆಯ ಮೂಲಕ ಅಥವಾ ಖುದ್ದಾಗಿ ತಲುಪಿಸತಕ್ಕದ್ದು, ಅಂಚೆಯ ವಿಳಂಬಕ್ಕೆ ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ಜವಾಬ್ದಾರರಾಗುವುದಿಲ್ಲ.
3. ದರಪಟ್ಟಿಯನ್ನು ಸಲ್ಲಿಸಲು ಕೊನೆಯ **ದಿನಾಂಕ: 28.07.2023 ಅಪರಾಹ್ನ 04.00** ಗಂಟೆಯವರೆಗೆ ಸಲ್ಲಿಸಬಹುದಾಗಿದ್ದು, ದರಪಟ್ಟಿಗಳನ್ನು ಮುದ್ದಾಂ ಅಥವಾ ಅಂಚೆಯ ಮೂಲಕ ಸಲ್ಲಿಸಬಹುದು. ಯಾವುದೇ ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಕ್ಕೆ ಕಾಲೇಜು ಜವಬ್ದಾರರಾಗುವುದಿಲ್ಲ.
4. ದರಪಟ್ಟಿಯನ್ನು **ದಿನಾಂಕ: 29.07.2023 ರಂದು ಅಪರಾಹ್ನ 01.00 ಗಂಟೆಗೆ** ತೆರೆಯಲಾಗುವುದು.
5. ದರಪಟ್ಟಿ ಸಲ್ಲಿಸುವ ಸಂಸ್ಥೆಯವರು ತಮ್ಮ ಸಂಸ್ಥೆಯ GSTIN No.ಮತ್ತು PAN No. ದಾಖಲೆಗಳನ್ನು ದರಪಟ್ಟಿಯ ಜೊತೆಗೆ ಲಗತ್ತಿಸಬೇಕು.

(ಪು.ತಿ.ನೋ)

6. ದರಪಟ್ಟಿ ಸಲ್ಲಿಸುವ ಸಂಸ್ಥೆಯವರು ತಮ್ಮ ಸಂಸ್ಥೆಯ GSTIN No. ಮತ್ತು PAN No. ದಾಖಲೆಗಳನ್ನು ದರಪಟ್ಟಿಯ ಜೊತೆಗೆ ಲಗತ್ತಿಸಬೇಕು.
7. ದರಪಟ್ಟಿಯ ಅವಧಿಯು ದರಪಟ್ಟಿಯನ್ನು ತೆರೆದ ದಿನಾಂಕದಿಂದ 60 ದಿನಗಳವರೆಗೆ ಚಾಲ್ತಿಯಲಿರುತ್ತದೆ.
8. ಸರಬರಾಜು ಮಾಡಲು ಯಾವುದೇ ಮುಂಗಡ ಹಣವನ್ನು ನೀಡಲಾಗುವುದಿಲ್ಲ.
9. ದರಪಟ್ಟಿಯಲ್ಲಿ ನಮೂದಿಸಿದ ದರಗಳು ತೆರಿಗೆ ಮತ್ತು ಸಾಗಾಣಿಕೆ ಮೊತ್ತವನ್ನು ಒಳಗೊಂಡಿರತಕ್ಕದ್ದು.
10. ದರಪಟ್ಟಿಯಲ್ಲಿ ನಮೂದಿಸಿರುವ ಪೀಠೋಪಕರಣ / ಸಾಮಗ್ರಿಗಳ **ಪ್ರಮಾಣವನ್ನು ಹೆಚ್ಚಿಸುವ ಅಥವಾ ಕಡಿಮೆಗೊಳಿಸುವ** ಹಕ್ಕನ್ನು ವಿಶ್ವವಿದ್ಯಾನಿಲಯ ವಿಜ್ಞಾನಕಾಲೇಜು ಕಾಯ್ದಿರಿಸಿಕೊಂಡಿರುತ್ತದೆ.
11. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಸಂಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು ಕಾಯ್ದಿರಿಸಿಕೊಂಡಿದೆ.
12. ದರಪಟ್ಟಿಗಳ ಆಯ್ಕೆಯ ವಿಷಯದಲ್ಲಿ ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ತೀರ್ಮಾನವೇ ಅಂತಿಮವಾಗಿರುತ್ತದೆ.
13. ತಮ್ಮ ಸಂಸ್ಥೆಯು ಸರಬರಾಜು ಮಾಡಲು ಉದ್ದೇಶಿಸಿರುವ ಪೀಠೋಪಕರಣ / ಸಾಮಗ್ರಿಗಳನ್ನು ಸಂರಚನೆಗಳಲ್ಲಿ ವ್ಯತ್ಯಾಸ ಇದ್ದರೆ ಸಂರಚನೆಗಳ ಮಾಹಿತಿಯನ್ನು ದರಪಟ್ಟಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು.
14. ಷರತ್ತು ಬದ್ಧ ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ.
15. ಪ್ರತಿ ಸಂಸ್ಥೆಯವರು ಏಕೈಕ ದರಪಟ್ಟಿಯನ್ನು ಮಾತ್ರ ಸಲ್ಲಿಸತಕ್ಕದ್ದು.
16. ಸರಬರಾಜು ಆದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.
17. ಹೆಚ್ಚಿನ ವಿವರಗಳು ಅಥವಾ ಮಾಹಿತಿಯು ಅಗತ್ಯವಿದ್ದಲ್ಲಿ ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ಇವರನ್ನು ಸಂಪರ್ಕಿಸಬಹುದು.

ಪ್ರಾಂಶುಪಾಲರು
ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು
ತುಮಕೂರು-572 103

ಪ್ರತಿಗಳು:

1. ಸೂಚನಾ ಫಲಕ, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು.
2. ಡಾ. ಹರೀಶ್ ಕುಮಾರ್ ಕೆ ಸಂಯೋಜಕರು, ವೆಬ್‌ಸೈಟ್ ಸಮಿತಿ, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು. ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
3. ಕಚೇರಿ ಪ್ರತಿ.